ಹುದ್ದೆಗಳನ್ನು ಕಿರಿಯ ಅಭಿಯಂತ್ಕರರ ಹುದ್ದೆಗೆ ಸಮಾನಾಂತರಗೊಳಿಸುವ ಬಗ್ಗೆ ಪರಿಶೀಲಿಸಿ 3 ವರ್ಷಗಳ ಡಿಪ್ಲೊಮೋ ಪಡೆದಿರುವ ಕೆಲಸ ನಿರೀಕ್ಷಕರನ್ನು ದಿನಾಂಕ 11.3.63ರ ಆದೇಶ ಸಂಖ್ಯೆ ಪಿಡಬ್ಲ್ಯೂಡಿ 9 ಎಸ್ ಎಡಿ 61ರ ಸೌಲಭ್ಯವನ್ನು ಪಡೆಯಲು ಅರ್ಹರೆಂದು ಆದೇಶಿಸಿತ್ತು.

ಹಿರಿಯ ಕೆಲಸ ನಿರೀಕ್ಷಕರ ಹುದ್ದೆಗಳು ಸೂಪರ್ ನ್ಯೂಮರಿ ಹುದ್ದೆಗಳಾಗಿರುತ್ತವೆ. ಈ ಹುದ್ದೆಗಳು ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಯ ವ್ಯಾಪ್ತಿಯಲ್ಲಿ ಬರುವುದಿಲ್ಲ. ಈ ಕಾರಣದಿಂದಾಗಿಯೇ ಇವರಿಗೆ ಕಿರಿಯ ಅಭಿಯಂತರರ ಸಮಾನಾಂತರ ವೇತನವನ್ನು ಮಾತ್ರ ನೀಡಲಾಗಿತ್ತು. ಈ ರೀತಿಯ ಕೆಲವು ಕೆಲಸ ನಿರೀಕ್ಷಕರುಗಳಿಂದ ತಮ್ಮನ್ನು ಕಿರಿಯ ಅಭಿಯಂತರರ ವೃಂದಕ್ಕೆ ಸೇರಿಸಬೇಕೆಂದು ಮನವಿಗಳು ಬಂದಿವೆ.

ಕುಷ್ಠರೋಗ ವಿಭಾಗದ ಫಿಸಿಯೋಥೆರಫಿಸ್ಟ್‌ಗಳಿಗೆ ಮುಂಬಡ್ತಿ.

ಶ್ರೀ ವೆಂಕಟರಮಣ : ಮಾನ್ಯ ಅಧ್ಯಕ್ಷಣೆಯವರೇ, ಸರ್ಕಾರದ ಆರೋಗ್ಯ ಇಲಾಖೆಯಲ್ಲಿ ಕುಷ್ಠರೋಗ ವಿಭಾಗ ಆರಂಭಿಸಿ 35 ವರ್ಷಗಳಾದರೂ ಕೂಡ ಆ ವಿಭಾಗದಲ್ಲಿ ಕೆಲಸ ಮಾಡುತ್ತಿರುವ ಫಿಸಿಯೋ-ಥೆರಾಪಿಸ್ಟ್, ಅವರುಗಳಿಗೆ ಇನ್ನೂ ಪ್ರಮೋಷನ್ ಕೊಡಲಾಗದೆ, ಈ ವಿಷಯವನ್ನು ಕಳೆದ 10 ವರ್ಷಗಳವರೆಗೆ ಪರಿಶೀಲನೆಯಲ್ಲಿ ಇಟ್ಟುಕೊಂಡು ತೀರ್ಮಾನವಾಗದೆ ಏಕೆ ಇನ್ನೂ ಸರ್ಕಾರದ ಆರೋಗ್ಯ ಕಾರ್ಯದರ್ಶಿಯವರು ತಮ್ಮ ಕಛೇರಿಯಲ್ಲಿ ಫೈಲ್ ನಂ ಹೆಚ್‌ಎಫ್‌ಡಬ್ಲ್ಯೂ: 107 : ಸಿಜಿಇ: 91 ಇಟ್ಟುಕೊಂಡಿರುತ್ತಾರೆ.

ಅನೇಕ ವರ್ಷಗಳಿಂದ ನಮ್ಮ ರಾಜ್ಯದಲ್ಲಿ ಸುಮಾರು 30 ಫಿಸಿಯೋ-ಥೆರಾಪಿಸ್ಟ್ ಹುದ್ದೆಗಳು ಖಾಲಿ ಇರುತ್ತವೆ. ಖಾಲಿ ಹುದ್ದೆಗಳನ್ನು ಏಕೆ ಇನ್ನೂ ಭರ್ತಿ ಮಾಡಲಿಲ್ಲ? ಅಥವಾ ಆ ಖಾಲಿ ಹುದ್ದೆಗಳನ್ನು ಅಬಾಲಿಷ್-ಇಲ್ಲದ ಹಾಗೆ ಮಾಡಬಾರದು? ಆದರ ಮೂಲಕ ಏಕೆ ಸರ್ಕಾರದ ಹಣವನ್ನು ಉಳಿಸಬಾರದು? ಎಂಬುದನ್ನು ಮಾನ್ಯ ಆರೋಗ್ಯ ಮಂತ್ರಿಗಳು ಈ ಸಬೆಯಲ್ಲಿ ಉತ್ತರ ನೀಡಲು ಕೋರುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯಮಂತ್ರಿಗಳು): ಮಾನ್ಯ ಸಭಾದ್ಯಕ್ಷಣೆಯವರೇ,

1. ಕುಷ್ಠ ರೋಗ ವಿಭಾಗದ ಕಾರ್ಯಕ್ರಮದಡಿಯಲ್ಲಿ 58 ಫಿಸಿಯೋತೆರಪಿಸ್ಟ್‌ಹುದ್ದೆಗಳು ಮಂಜೂರಾಗಿದ್ದು ಈ ಪೈಕಿ 28 ಜನ ಪಿರಿಯೋತೆರಪಿಸ್ಟ್‌ರು ಕೆಲಸ ಮಾಡುತ್ತಿದ್ದಾರೆ. ಇದರ ವೃಂದ ಮತ್ತು ನೇಮಕಾತಿ ನಿಯಮದಲ್ಲಿ ಮುಂದಿನ ಯಾವ ಭಡ್ತಿಗೂ ಅವಕಾಶವಿಲ್ಲ. ಆದರೆ 10 ವರ್ಷ ಸೇವೆ ಸಲ್ಲಿಸಿದ ನೌಕರರಿಗೆ ಕಾಲಬದ್ಧ ಪ್ರಗತಿ ವೇತನ ಕೊಡಲಾಗಿದೆ. ಅಲ್ಲದೆ ಇತ್ತೀಚಿನ ಸರ್ಕಾರಿ ಆದೇಶದಂತೆ ಒಂದೇ ಹುದ್ದೆಯಲ್ಲಿ 15 ವರ್ಷ ಸೇವೆ ಸಲ್ಲಿಸಿದ ನೌಕರರಿಗೆ ಸ್ವಯಂ ಚಾಲಿತ ವಿಶೇಷ ಪದೋನ್ನತಿಯನ್ನು ನೀಡಲಾಗಿದೆ. ಈ ನೌಕರರ ವಿಷಯವನ್ನು ಪರಿಶೀಲಿಸಲಾಗಿ ಮಿತವ್ಯಯ ಆದೇಶದ ಪ್ರಸ್ತಾವನೆಯನ್ನು ಒಮ್ಮೆ ಕೈಬಿಡಲಾಗಿತ್ತು. ಆದರೆ ಮತ್ತೆ ಸಂಘದ ಒತ್ತಾಯದಿಂದ ವಿಷಯವನ್ನು ಪುನಃ ಪರಿಶೀಲನೆಗೆ ತೆಗೆದುಕೊಳ್ಳಲಾಗಿದೆ. ಮತ್ತು ಕಡತವು ಆರ್ಥಿಕ ಇಲಾಖೆಯ ಸಹಮತಿಗೆ ಹೋಗುವ ಹಂತದಲ್ಲಿದೆ.
2. 30 ಫಿಸಿಯೋತೆರಪಿಸ್ಟ್ ಹುದ್ದೆಗಳು ಖಾಲಿ ಇವೆ. ಮೇಲೆ ತಿಳಿಸಿದಂತೆ ಆರ್ಥಿಕ ಮಿತವ್ಯಯ ಆದೇಶಗಳ ಹಿನ್ನೆಲೆಯಲ್ಲಿ ಈ ಹುದ್ದೆಗಳನ್ನು ಭರ್ತಿ ಮಾಡಲಿಲ್ಲ. ಈಗ ಆರ್ಥಿಕ ಇಲಾಖೆಯು ಕೆಲವು ಶರತ್ತುಗೊಳಗೊಂಡು ಈ ಹುದ್ದೆಗಳನ್ನು

ಭರ್ತಿಮಾಡುಲು ಅನುಮತಿ ನೀಡಿರುವುದರಿಂದ, ಸದ್ಯದಲ್ಲಿಯೇ ಈ ಹುದ್ದೆಗಳನ್ನು ಭರ್ತಿ ಮಾಡುವ ಕ್ರಮ ಕೈಗೊಳ್ಳಲಾಗುವುದು.ಈಹುದ್ದೆಗಳನ್ನು ಅಬಾಲಿಷ್ ಮಾಡುವ ಪ್ರಸ್ತಾವನೆ ಇಲ್ಲ.

4. ಉತ್ತರ ಕನ್ನಡ ಜಿಲ್ಲೆಗಳಿಗಾಗಿ ಬಯಲುಸೀಮೆ ಅಭಿವೃದ್ಧಿ ಮಂಡಳಿ ರಚನೆ.

1.35. ಪಿ.ಎಂ.

ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ): ಮಾನ್ಯ ಉಪಾಧ್ಯಕ್ಷಣೆಯವರೆ, ಉತ್ತರ ಕರ್ನಾಟಕದ ಜಿಲ್ಲೆಗಳಿಗಾಗಿ ಬಯಲುಸೀಮೆ ಅಭಿವೃದ್ಧಿ ಮಂಡಳಿ ರಚನೆ ಮಾಡುವ ಕುರಿತು-ಉತ್ತರ ಕರ್ನಾಟಕದ ಅನೇಕ ಜಿಲ್ಲೆಗಳು ಶೈಕ್ಷಣಿಕವಾಗಿ, ಕೃಷಿ, ಕೈಗಾರಿಕೆ, ನೀರಾವರಿ, ಗ್ರಾಮೀಣ ಅಭಿವೃದ್ಧಿ ಮುಂತಾದ ಕ್ಷೇತ್ರಗಳಲ್ಲಿ ಸಾಕಷ್ಟು ಅಭಿವೃದ್ಧಿಯಾಗದೇ ಬಹಳ ಹಿಂದುಳಿದಿರುತ್ತದೆ. ಇಲ್ಲಿನ ಅನೇಕ ಅಭಿವೃದ್ಧಿ ಕಾರ್ಯಗಳು ಅರ್ಧವಾಗಿ ಉಳಿದಿದ್ದು ಯೋಜನೆಗಳು ಕಾರ್ಯಗತಗೊಳ್ಳದೆ ಹಾಗೆ ಉಳಿದಿರುತ್ತದೆ. ಅಲ್ಲದೆ ಇಲ್ಲಿನ ಸಾರ್ವಜನಿಕರ ಪ್ರಮುಖ ಬೇಡಕೆಗಳಲ್ಲಿ ಇದೊಂದು ಸಹ ಮುಖ್ಯವಾದ ಬೇಡಿಕೆಯಾಗಿರುತ್ತದೆ. ಆದಕಾರಣ, ಈ ಭಾಗದ ಸರ್ವತೋಮುಖ ಅಭಿವೃದ್ಧಿಯ ದೃಷ್ಟಿಯಿಂದ ಒಂದು ಬಯಲುಸೀಮೆ ಅಭಿವೃದ್ಧಿ ಮಂಡಳಿ ರಚಿಸಿ 1993-94ನೇ ಸಾಲಿನ ಆಯವ್ಯ ಪತ್ರದಲ್ಲಿ ನೂರು ಕೋಟಿ ರೂಪಾಯಿ ಮೀಸಲಿಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀಎಂ. ವೀರಪ್ಪ ಮೋಯ್ಲಿ (ಮುಖ್ಯ ಮಂತ್ರಿಗಳು): ಮಾನ್ಯ ಉಪಾಧ್ಯಕ್ಷಣೆಯವರೇ, ತಮ್ಮ ಅನುಮತಿ ಕೋರಿ ಈ ಹೇಳಿಕೆಯನ್ನು ನೀಡ ಬಯಸುತ್ತೇನೆ.

ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ, ಗುಲ್ಬರ್ಗಾ, ಹಾಗೂ ಮಲೆನಾಡು ಅಭಿವೃದ್ಧಿ ಮಂಡಳಿ ಶಿವಮೊಗ್ಗ ಇವುಗಳು ಇತ್ತೀಚೆಗೆ ಅಸ್ತಿತ್ವಕ್ಕೆ ಬಂದಿದೆ. ಯಾವುದೇ ಹೆಚ್ಚಿನ ಪ್ರದೇಶಾಭಿವೃದ್ಧಿ ಮಂಡಳಿಗಳು ರಚನೆಯ ಬಗ್ಗೆ ವಿಚಾರಿಸುವುದಕ್ಕಿಂತ ಮೊದಲು ಈಗಾಗಲೇ ಸ್ಥಾಪಿತವಾಗಿರುವ ಪ್ರದೇಶಾಭಿವೃದ್ಧಿ ಮಂಡಳಿಗಳ ಕಾರ್ಯ ವೈಖರಿಯನ್ನು ವೀಕ್ಷಿಸುವುದು ಸೂಕ್ತ.

ಬ್ರಹ್ಮಾವರ ಪೋಲೀಸ್ ಠಾಣೆಯ ವ್ಯಾಪ್ತಿಯ ವಾರಂಬಳ್ಳಿಗ್ರಾಮದಲ್ಲಿ ವಿವಿಯನ್ ಡಿಸಿಲ್ವ ಎನ್ನುವವರ ಕೊಲೆ.

ಶ್ರೀ ಸಿ.ಪಿ. ಬಸವರಾಜ್ (ಬ್ರಹ್ಮಾವರ): ಮಾನ್ಯ ಉಪಾಧ್ಯಕ್ಷಣೆಯವರೆ, ದಿನಾಂಕ 29-12-1992ರ ರಾತ್ರಿ 10-30 ಗಂಟೆಗೆ ಬ್ರಹ್ಮಾವರ ಪೋಲೀಸ್ ಠಾಣೆಯ ವ್ಯಾಪ್ತಿಯ ವಾರಂಬಳ್ಳಿ ಗ್ರಾಮದಲ್ಲಿ ಕೆಲವು ಯುವಕರು ವಿವಿಯನ್ ಡಿಸಿಲ್ವ ಎನ್ನುವ ಯುವಕನನ್ನು ತಿವಿದು ಕೊಂದು ಅದೇ ವ್ಯಕ್ತಿಯ ಸಂಬಂಧಿಗಳನ್ನು ಮರಣಾಂತಿಕವಾಗಿ ತಿವಿದಿರುತ್ತಾರೆ. ಈ ಘಟನೆ ನಡೆದ ಹತ್ತೇ ನಿಮಿಷಗಳಲ್ಲಿ ಸಾರ್ವಜನಿಕರು ದೂರವಾಣಿ ಮೂಲಕ ಬ್ರಹ್ಮಾವರ ಪೋಲೀಸ್ ಠಾಣೆಯಲ್ಲಿ ಆ ವೇಳೆಯಲ್ಲಿ ಉಪಸ್ಥಿತರಿದ್ದ ಹೆಡ್ ಕಾನ್‌ಸ್ಟಬಲ್ ಮತ್ತು ಠಾಣೆಯ ರೈಟರ್‌ರವರಿಗೆ ಆರೋಪಿಗಳ ಹೆಸರು, ಬಳಸಿದ ವಾಹನಗಳ ವಿವರ ನೀಡಿದ್ದಾಗ್ಯೂ ಪೋಲೀಸರು ಒಂದೂವರೆ ಕಿಲೋ ಮೀಟರ್ ದೂರದ ಈ ಘಟನಾ ಸ್ಥಳಕ್ಕೆ ಮೂರು ಗಂಟೆ ತಡವಾಗಿ ಬಂದು ಆರೋಪಿಗಳು ತಪ್ಪಿಸಿಕೊಳ್ಳುವಲ್ಲಿ ಸಹಕರಿಸಿರುತ್ತಾರೆ.